		ಪರಿಶೀಲಿಸಿ, ೨೦೦೭–೦೮ ನೇ ಸಾಲಿನಲ್ಲಿ ಆಯವ್ಯಯದ ಲಭ್ಯತೆಯನ್ನಾಧರಿಸಿ, ಚಾಮರಾಜನಗರ ಜಿಲ್ಲೆಗೆ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೧೩ (೨೩೨೪)

ಸದಸ್ಯರ ಹೆಸರು : ಶ್ರೀ ವಾಟಾಳ್ ನಾಗರಾಜ್
(ಚಾಮರಾಜನಗರ)

ಉತ್ತರಿಸುವ ಸಚಿವರು : ಶ್ರೀ ರಾವು ನಾಯಕ್
(ಪಶು ಸಂಗೋಪನೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯಾದ್ಯಂತ ಇರುವ ಪಶುಚಿಕಿತ್ಸಾ ಕೇಂದ್ರಗಳೆಷ್ಟು ?	ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿ ಒಟ್ಟು ೩೮೭೮ ಪಶುವೈದ್ಯಸಂಸ್ಥೆಗಳಿವೆ. ಚಾಮರಾಜನಗರ ಜಿಲ್ಲೆಯಲ್ಲಿ ೭೬ ಪಶುವೈದ್ಯ ಸಂಸ್ಥೆಗಳಿವೆ. ಅವುಗಳ ವಿವರ ಈ ಕೆಳಗಿನಂತೆ ಇದೆ :-

(೧)	ಪಶು ಆಸ್ಪತ್ರೆ	೦೭
(೨)	ಪಶುಚಿಕಿತ್ಸಾಲಯಗಳು	೨೩
(೩)	ಸಂಚಾರಿ ಪಶುಚಿಕಿತ್ಸಾಲಯಗಳು	೦೪
(೪)	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು	೨೯
(೫)	ಪ್ರಧಾನ ಗ್ರಾಮೀಣ ಯೋಜನೆ ಉಪಕೇಂದ್ರ	೧೨
(೬)	ಪ್ರಧಾನ ಗ್ರಾಮೀಣ ಯೋಜನೆ	೦೧
	ಒಟ್ಟು	೭೬

(ಆ)	ಈ ಪಶುಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿರುವ ಪಶುಚಿಕಿತ್ಸಾಲಯಗಳನ್ನು ಪಶುಆಸ್ಪತ್ರೆಗಳನ್ನಾಗಿ ಮತ್ತು ಪರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಘೂ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸಲು ಕಾರ್ಯಕ್ರಮ ಇರುತ್ತದೆ. ಈ ಮೇಲ್ದರ್ಜೆಗೇರಿಸುವ ಕಾರ್ಯಕ್ರಮಕ್ಕೆ ಯಾವುದೇ ಕಾಲಮಿತಿ ಇರುವುದಿಲ್ಲ. ಅವಶ್ಯಕತೆ ಆಗನುಗುಣವಾಗಿ ಮತ್ತು ಪಶುವೈದ್ಯ ಪದವೀಧರರ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಮಾಡಬೇಕಾಗುತ್ತದೆ, ಇಲ್ಲಿಯವರೆಗೆ ರಾಜ್ಯದಲ್ಲಿ ೨೬೩ ಪಶುಚಿಕಿತ್ಸಾಲಯಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಮತ್ತು ೫೦೭ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಉನ್ನತೀಕರಸಲು ಪ್ರಸ್ತಾವನೆ ಸ್ವೀಕರಿಸಲಾಗಿದೆ. ಪ್ರಸ್ತುತ ೫೦ ಪಶುಚಿಕಿತ್ಸಾಲಯಗಳನ್ನು ಪಶು ಆಪತ್ರೆಗಳನ್ನಾಗಿ ಮತ್ತು ೧೫೦ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಘೂ ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಉನ್ನತೀಕರಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.
(ಇ)	ಪಶುಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯರ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?	ಹೌದು, ಸರಕಾರದ ಗಮನಕ್ಕೆ ಬಂದಿದೆ, ಪ್ರಸ್ತುತ ಪಶುವೈದ್ಯ ಸೇವಾ ಇಲಾಖೆಯಲ್ಲಿ ೬೯೩ ಪಶುವೈದ್ಯಾಧಿಕಾಖಿಇಗಳು ಮತ್ತು ೭೮ ಸಹಾಯಕ ನಿರ್ದೇಶಕರುಗಳ ಹುದ್ದೆ

		ಖಾಲಿ ಇವೆ.
(ಈ)	ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಬಳೇನು?	ಶೇಕಡಾ. ೯೦ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುವೇನ ಭರ್ತಿ ಮಾಡಲಾಗುವುದು. ಶೇ. ೧೦ ರಷ್ಟು ನೇರ ನೇಮಕಾಥಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು. ೪ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಪ್ರಸ್ತುತ ಕರ್ನಾಟಕ ಲೋಕಸೇವಾ ಆಯೋಗದಿಂದ ೪೧ ಪಶು ವೈದ್ಯಾಧಿಕಾರಿಗಳ ನೇಮಕತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತು ೭೭ ಪಶು ವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮಜರುಗಿಸಲಾಗುತ್ತಿದೆ. ವಿಶೇಷ ನೇಮಕಾತಿ ನಿಯಮ ೨೦೦೩ರ ಅಡಿ ೫೭೭ ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿತ್ತು. ಆದರೆ ಇದುವರೆಗೆ ೩೮೩ ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ. ಇನ್ನುಳಿದ ೧೯೪ ಪಶುವೈದ್ಯಾಧಿಕಾರಿಗಳನ್ನು ವಿಶೇಷ ನೇಮಕಾತಿ ನಿಯಮ ೨೦೦೩ ರಡಿ ನೇಮಕಾತಿ ಮಾಡಿಕೊಳ್ಳಲು ಶೀಘ್ರದಲ್ಲಿಯೇ ಕ್ರಮವಹಿಸಲಾಗುತ್ತಿದೆ.